Rega No M 1229 | 43rd Year | Sri 'Satyavadi' Mysore | 20—2—[illegible]

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸ್ಥಾಪಕರು— ಅಂಬುಜಮ್ಮನವರ ಮೊಮ್ಮಗ ಎಂ. ಎ. ಸುಬ್ಬರಾಯುಡು [ಬಿಡಿ ಪ್ರತಿ 1½ ಪೈ

ಭಾರತಕ್ಕೆ ನೆರವು ನೀಡಬೇಕೆಂದು ಅಮೇರಿಕಾ ಕಾಂಗ್ರೆಸಿನಲ್ಲಿ ನಿರ್ಣಯ

ವಾಷಿಂಗ್ಟನ್ 19 — ಡೆಮೊಕ್ರಾಟಿಕ್ ಪಕ್ಷದ ಸೆನೆಟರಾದ ಜಾರ್ಜ್ ಕೆಸ್ಟ್ ಡಿಯವರು ಕಾಂಗ್ರೆಸಿನಲ್ಲಿ ನಿರ್ಣಯವನ್ನು ಮಂಡಿಸಿ, ಪ್ರಾಮುಖ್ಯತೆಯನ್ನು ಕಮ್ಯೂನಿಸ್ಟೇತರ ರಾಷ್ಟ್ರದೊಡನೆ ಸೇರಬೇಕೆಂದು, ಭಾರತ ಆರ್ಥಿಕ ಅಭಿವೃದ್ಧಿ ಪರಿಶೀಲನೆಗಾಗಿ ಭಾರತಕ್ಕೆ ನಿಯೋಗ ಕಳಿಸಿ ಅದನ್ನು ಹೇಗೆ ಸಾಧಿಸಲು ಸಾಧ್ಯವೆಂಬುದನ್ನು ಪರಿಶೀಲಿಸುವಂತೆ ತಿಳಿಸಿದರು

ಪಂಚ ವೈದ್ಯರ ಸಮ್ಮೇಳನ

ಬೆಂಗಳೂರು 19 — ಮುಖ್ಯಮಂತ್ರಿ ಶ್ರೀ ಬಿ ಡಿ ಜತ್ತಿಯವರು ಈ ದಿನ ಅಖಿಲ ಭಾರತ ಪಂಚ ವೈದ್ಯರ ಸಮ್ಮೇಳನ ಆರಂಭಿಸುತ್ತಾ, ದಂತ ಆರೋಗ್ಯ ರಕ್ಷಿಸಲು ದಂತವೈದ್ಯರು ಶ್ರಮಿಸಬೇಕೆಂದು ತಿಳಿಸಿದರು

ಯುದ್ಧ ಆಗುವದಿಲ್ಲ

ಭಾರತ-ಪಾಕಿಸ್ತಾನಗಳಲ್ಲಿ ಯುದ್ಧ ಆಗುವದಿಲ್ಲವೆಂದು, ಯುದ್ಧದಿಂದ ಎರಡು ರಾಜ್ಯಗಳು ನಾಶವಾಗುವದೆಂದು ಪಾಕಿ ಸ್ತಾನ ಅನ್ನಕ್ಷ ಅಯೂಬಖಾನರು [illegible] ದಾಗಿ ಭಾರತದ ಮಾಜಿ [illegible] ಕಾರಿಯಪ್ಪನವರು [illegible] ಶ್ರೀ [illegible] ದೇಶಿಸಿ ಸಮಾಜ ಕಲ್ಯಾಣ [illegible] ಪ್ರೊಫೆಸರ್ ಮಲ್ಲಪ್ಪನವರು [illegible] 1940 ಕ್ಕೆ ಮೊದಲು ಮನೆಗಳು ಕಟ್ಟಿಸಿದವರ ಹೆಸರಿನಲ್ಲಿದ್ದರೆ ಅದನ್ನು ಲವಣಿಗೆ ಕೆಡಿಸಲಾಗುವದು ಮತ್ತು ಹೊಸ ಮನೆಗಳನ್ನು ಕಟ್ಟಿಸಿದವರಿಗೆ ಅದನ್ನು ಹಂಚಿಕೆ ಮಾಡಲಾಗುವದು ಎಂದೂ

ಮಂತ್ರಿಯಿಂದ ಆರಂಭ

ವಸತಿ ಇಲ್ಲದ ಕಾರ್ಮಿಕರಿಗೆ, ಪೆಂಡರುಗಳಿಗೆ, ಸಣ್ಣ ವ್ಯಾಪಾರಿಗಾರರಿಗೆ, ಬೂಟ್ಸು ಪಾಲೀಷು ಮಾಡುವ ಬಾಲಕರಿಗೆ ಮುಂತಾದವರಿಗೆ ನೈಟ್ ಶೆಲ್ಟರ್ ಉದ್ಘಾಟನೆಯನ್ನು ಶ್ರೀ ಟಿ ಮರಿಯಪ್ಪನವರು ನಾಡಿದ್ದು ಮಧ್ಯಾಹ್ನ 4 ವರೆ ಗಂಟೆಗೆ ಆರಂಭಿಸುವರು ಭಾರತ ಸೇವಕ ಸಮಾಜದವರು ಕಾಳಮ್ಮ ದೇವಾಲಯ ರಸ್ತೆಯಲ್ಲಿ ವಸತಿ ಏರ್ಪಡಿಸಿರುವರು.

ಸನ್ಯಾಸ ಸಭೆ

ಮೈಸೂರು ಶ್ರೀ ವರಲಕ್ಷ್ಮೀ ಅಕೆಡಮಿಯಾಸ್ ಆಫ್ ಫೈನ್ ಆರ್ಟ್ಸ್‌ನ ಸ್ಥಾಪಕರಾದ ವೈಸೂರು ಬ್ರದರ್ಸ್‌ನ ನಾಟ್ಯ ಶಾಸ್ತ್ರಕೋವಿದ, ಸಂಗೀತವಿದ್ವಾಂಸ ಶ್ರೀ ಚಂದ್ರಶೇಖರಯ್ಯನವರನ್ನು ಈ ತಿಂಗಳು 23 ನೇ ತಾ|| ಸಂಜೆ 6 ಗಂಟೆಗೆ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಸನ್ಮಾನಿಸಲಾಗುವದು ಭಾರತೀಯ ಸಂಗೀತ ಮತ್ತು ನೃತ್ಯಕ್ಕೆ ಅವರು ಸಲ್ಲಿಸಿರುವ ಸೇವೆಗಾಗಿ ಈ ಸನ್ಮಾನ ಶ್ರೀ ಎ. ಎಕ್. ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು.

ಪ್ರದರ್ಶನ

ಕೊಲಂಬೊ 19 — ಸಾರ್ವಜನಿಕ ರಕ್ಷಣಾ ಶಾಸನದ ಪ್ರತಿಭಟನೆ, ಸರ್ಕಾರದ ಆಜ್ಞೆಯನ್ನು ಭಂಗಮಾಡಿ ಕೆಲವು ನೂರು ಸರ್ಕಾರಿ ನೌಕರರು ಮತ್ತು ಕಾರ್ಮಿಕ ಸಂಘಗಳವರು ಪ್ರದರ್ಶನ ಮಾಡಿದರು

ಮರಣ

ಬ್ರಜಾವಿಲ್ಲೆ 19 — ಬೀದಿ ಹೂಡೆದಾಟದಲ್ಲಿ ಸತ್ತವರ ಸಂಖ್ಯೆ 76

ಸಮ್ಮತಿಯಿಂದ ಸ. ವ್ಯವಸಾಯ

ನವ ದೆಹಲಿ 19 — ಪಂ|| ನೆಹರು ಈ ದಿನ ಲೋಕಸಭೆಯಲ್ಲಿ ಹೇಳಿಕೆಯನ್ನಿತ್ತು, ದೇಶದಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಜಂಟಿ ಸಹಕಾರ ವ್ಯವಸಾಯ ಪದ್ಧತಿ ಲಾಭಕರವೆಂದು ನುಡಿದರು ಆ ಕ್ರಮವನ್ನು ಜನರ ಸಮ್ಮತಿಯ ಮೇಲೆ ಕೈಗೊಳ್ಳಲಾಗುವದೆಂದು ತಿಳಿಸಿದರು

ಮಥಾಯರ ವ್ಯವಹಾರ

ನವ ದೆಹಲಿ 19 — ಪ್ರಧಾನಿ ಪಂ|| ನೆಹರು ಈ ದಿನ ಲೋಕಸಭೆಯಲ್ಲಿ ಹೇಳಿಕೆಯಿತ್ತು, ಮಥಾಯರ ವ್ಯವಹಾರ ಬಗ್ಗೆ ವಿಷ್ಣು ಸಹಾಯ ವಂದಿಯನ್ನು ಅರ್ಥ ಸಚಿವರು ಮತ್ತು ಅಡಿಟರು ಜನರಲ್‌ರ ಪರಿಶೀಲನೆಗೆ ಒಳ್ಪಿಸಲಾಗುವದೆಂಬುದರ ಪರಿಶೀಲನೆಗಾಗಿ ಕಳಿಸಲಾಗುವದೆಂದು ತಿಳಿಸಿದರು.

ಮೆಕ್ಸಿಕೋಗೆ ಐಕ್

ಆಸ್ಟಿ 19 — ಮೆಕ್ಸಿಕೊ ಅಧ್ಯಕ್ಷ ಅಡಾಲ್ಫ ಲೋಪೇಜ ಮಾಟೋಸರ ಭೇಟಿಗಾಗಿ ಅಧ್ಯಕ್ಷ ಐಸ್ ಹೋವರರು ಕಕಾಪಲ್ಕೊಗೆ ತೆರಳಿದರು

ಬ್ರಿಟನ್ನಿನ ಮಾಜಿ ಪ್ರಧಾನಿ ಲಾರ್ಡ್ ಅಟ್ಲಿ ಇಲ್ಲಿನ ಹೈಸ್ಕೂಲಿನಲ್ಲಿ ಭಾಷಣ ಮಾಡುತ್ತಾ, ರೋಗಗ್ರಸ್ಥನಾಗಿರುವ ಅಮೇರಿಕಾ ಸಂಸ್ಥಾನ ಕಾರ್ಯದರ್ಶಿ ಜಾರ್ಜ್ ಫಾಸ್ಟರ್ ಡಲ್ಸ್ ಸ್ಥಾನದಲ್ಲಿ ಕೂಡಲೇ ಬೇರೊಬ್ಬರ ನೇಮಕ ಆಗಬೇಕು ಎಂದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾಂ ದೈವಜ್ಞ ಶಿರೋಮಣಿ
ಸಂಪತ್ಕೃಷ್ಣ ಜೋಯಿಸರಿಂದ
21 ಶ್ರಯೋದಶಿ ಪುಷ್ಯ

ಗಲಭೆ

ಜಬ್ಬಲ್ಪುರ 19 — ಜಬ್ಬಲ್ಪುರ ಪಟ್ಟಣದಲ್ಲಿ ಬೆಳಗಿನಿಂದ ಸಂಜೆ ವರೆಗೆ ಕರ್ಫ್ಯೂ ವಿಧಿಸಲಾಗಿತ್ತು. ಅಂಗಡಿಗಳ ಲೂಟಿ ವ್ಯಯಕ್ಕೆ ಅಲ್ಲಲ್ಲಿ ಸಡೆಯುತ್ತು. ಜೈನ ದೇವಾಲಯದಿಂದ ವಿಗ್ರಹ ತೆಗೆಯುವ ಯತ್ನ ನಡೆಯಿಂದಲೂ ಪರಿಸ್ಥಿತಿ ಇದೆ. ಮುಖ್ಯ ರಸ್ತೆಗಳಲ್ಲಿ ಪೋಲೀಸರನ್ನು ಇಟ್ಟಿದೆ ಮತ್ತು ಜನರನ್ನು ಹತೋಟಿಯಲ್ಲಿಡಲಾಗಿದೆ 144 ನೆಯ ನಿಷೇಧಾಜ್ಞೆಯ ಕಾರಣ ಸಭೆ ಮೆರವಣಿಗೆ ನಿಷೇಧಿಸಲಾಗಿದೆ ಶ್ರೀ ರಾಮ ಮತ್ತು ಸೀತೆ ಸಂಬಂಧವಾಗಿ ಆಕ್ಷೇಪಾರ್ಹ ಲೇಖನ ಜೈನ ವಾರಪತ್ರಿಕೆಯಲ್ಲಿ ಪ್ರಕಟವಾಗಿ ಈ ಪರಿಸ್ಥಿತಿಯಾಯಿತೆಂದು ಸಂಪಾದಕರು ಕ್ಷಮೆ ಕೇಳಿರುವರೆಂದು ವರದಿ.

— × —

ನವ ದೆಹಲಿ 17 — ಭಾರತದ ವಿದೇಶಿ ಮಗ್ಗಟ್ಟನ್ನು ಬಗೆಹರಿಸಲು ಅಮೆರಿಕ ವಿಂಶವು ವೇತನ ನಿಧಿಯಿಂದ ಭಾರತಕ್ಕೆ 10 ಮಿಲಿಯ ಸ್ಟೆರ್ಲಿಂಗ್ ಪೌಂಡುಗಳನ್ನು ಕೊಟ್ಟಿದೆ.

ನವ ದೆಹಲಿ 18 — ಗೋಧಿ ಬೆಲೆ ಜೋಳದ ಬೆಲೆ ಮತ್ತು ಇತರ ಧಾನ್ಯದ ಬೆಲೆ ಇಳಿಯುತ್ತಿದೆ

ವಾಲ್ಪಾಟಿನ ಸಂಸತ್ ಸಭೆ ವಸ್ತುಪ್ರದರ್ಶನ ವ್ಯವಸ್ಥೆ ಪ್ರತಿಭಟಿಸಿ ಗೇಟಿನ ಎದುರು ಪಿಕೆಟ್ ಮಾಡಿದ ಸುದರ್ಭದಲ್ಲಿ 15 ಜನ ಪಿಎಸ್ಟಿಯವರ ಬಂಧನವಾಗಿದೆ.

ಕೇಂದ್ರ ಕೈಗಾರಿಕೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಇಂದು ರಾತ್ರಿ ಬೆಂಗಳೂರಿಗೆ ಆಗಮಿಸುವರು

ರಷ್ಯದ ಸುಪ್ರೀಂ ಸೋವಿಯೆಟ್‌ನ 30 ಜನರ ನಿಯೋಗ ಮಾಸ್ಕೋ 4 ನೇ ತಾ|| ಬೆಂಗಳೂರಿಗೆ ಬರುವದು

ವಿವಿಧ ವರ್ತಮಾನ

ನವದೆ ಲಿ 18— ಹೊಲಿಗೆ ಯಂತ್ರ ಗಳ ಮಾರುವ ಬೆಲೆಯು ಈಗ 1957 ರಲ್ಲಿ ದ್ದುದಕ್ಕಿಂತಲೂ ಯಂತ್ರವೊಂದಕ್ಕೆ 15 ರೂಗಳಷ್ಟು ಕಡಮೆಯಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ

ನವದೆಹಲಿ 18— ಪ್ರಸ್ತುತ ಖಾರಿ ಫ್ ಬೆಳೆಯಿಂದ ಕೇಂದ್ರ ಸರಕಾರವು ಅ ಕ್ಕಿಯನ್ನು ಮಾತ್ರ ಕೊಂಡಿದೆಯೆಂದೂ 1959 ರ ಜನವರಿ 25 ರವರೆಗೆ ಸುಮಾರು 136000 ಟನ್ನುಗಳಷ್ಟು ಅಕ್ಕಿಯನ್ನು ಕೊಂಡಿಡಯೆಂದೂ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಂ ಂ

ನವದೆಹಲಿ 19— ದಕ್ಷಿಣ ವಲಯದಲ್ಲಿ ಗೋಧಿಯ ಬಳಕೆಯಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚುವರಿ ಕಂಡುಬಂದಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಗಿದೆ.

ಂ ಂ

ನವದೆಹಲಿ 19— ಗಣರಾಜ್ಯ ದಿನೋತ್ಸವ ಸಮಯದಲ್ಲಿ ಘೋಷಿಸಲಾದ ಪ್ರಶಸ್ತಿಗಳನ್ನು ಏಪ್ರಿಲ್ 8 ರಂದು ರಾಷ್ಟ್ರಪತಿ ಭವನದಲ್ಲಿ ನಡೆಯುವ ಒಂದು ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಹಂಚುವರು.

ಂ ಂ

ನವದೆಹಲಿ 19— ದ್ವಿತೀಯ ಯೋಜನಾವಧಿಯಲ್ಲಿ ವಸತಿ ನಿರ್ಮಾಣಕ್ಕಾಗಿ ಮೊದಲು 120 ಕೋಟಿ ರೂಗಳನ್ನು ಒದಗಿಸಲಾಗಿತ್ತು. ಆದರೆ ಯೋಜನೆ ವಿಚ್ಛಿದ ಪುನರ್ ಪರಿಶೀಲನೆಯಾಗಿ ಈ ಹಣವನ್ನು 84 ಕೋಟಿ ರೂಪಾಯಿಗಳಿಗೆ ಇಳಿಸಬೇಕಾಯಿತು. ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ

ನವದೆಹಲಿ 19— ಕುಟುಂಬ ಯೋಜನಾ ಪ್ರಚಾರ ದಾಗೂ ಶಿಕ್ಷಣದ ವ್ಯವಸ್ಥೆಯನ್ನು ಬಿರುಸುಗೊಳಿಸಬೇಕೆಂದು ಕೇಂದ್ರ ಕುಟುಂಬ ಯೋಜನಾ ಮಂಡಲಿಯು ಸಲಹೆ ಮಾಡಿದೆ.

ಂ ಂ

ನವದೆಹಲಿ 18— ದೇಶದಲ್ಲಿ ಕಳೆದ ವರ್ಷ ಕಾಳುಗಳು ಹಾಗೂ ಇತರ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ತೀವ್ರವಾದ ಇಳುವರಿಯಾಗಿದ್ದುದೇ ಈಗ ಕಾಳುಗಳ ಬೆಲೆಯು ಏರುವುದಕ್ಕೆ ಮುಖ್ಯ ಕಾರಣ, ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಮೈಸೂರು ನಗರದ ಲೋಕಸಭೆಯ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಕಾರ್ಯವು ಪ್ರಸಕ್ತ ಸಾಲಿನಲ್ಲಿ (1959) ತಾ || 12-12-1959 ರಿಂದ ಪ್ರಾರಂಭಿಸಲ್ಪಡುತ್ತದೆ; ಪೌರಪಭೆಯ ನಾಕರರು ಗಳು ತಮ್ಮ ಮನೆಗಳಿಗೆ ಭೇಟಿ ಕೊಡುವ ಕಾಲದಲ್ಲಿ ಮತದಾರರುಗಳ ಪಟ್ಟಿಯಲ್ಲಿ ರತಕ್ಕ ತಪ್ಪುಗಳನ್ನು ತಿದ್ದುಪಡಿರಲ್ಲೂ ಹೊಸದಾಗಿ ಸೇರಿಸಬೇಕಕ್ಕ ಹೆಸರ ಗಳನ್ನು ಸೇರಿಸುವುದಕ್ಕೂ, ಹೆಚ್ಚುವರಿ ಹೆಸರುಗಳನ್ನು ತೆಗೆದುಹಾಕಲೂ ಸಾರ್ವಜನಿಕರು ವೇಳ್ಕಂಡ ವಿವರಗಳನ್ನು ಕೊಟ್ಟು ಸಹಕರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಲಾಗಿತ್ತೆ, ಎಂದು ಮುನಿಸಿಪಲ್ ಕಮಿಷನರ್ ಮತ್ತು ಎಲೆಕ್ಟೋರಲ್ ರಿಜಿಸ್ಟ್ರೇಷನ್ ಅಧಿಕಾರಿಯವರು ತಿಳಿಸಿರುತ್ತಾರೆ



B. S. K. Rao

High-class Gents Dress-Maker
Upadhyaya's Building
Sayyaji Rao Road
MYSORE

For Quality Printing

L. N. Press

Swarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾ ರ್ಮ ಸಿ

ಆಸ್ಟ್ಸ್‌ಡೌನ್ ಬಜಾರ್ ಮೈಸೂರು

Our Bangalore Sales Depot address—
71 / 4 Arcot Sreenivasachar St., Bangalore 2.

ವುಡ್‌ಲಾಂಡ್ಸ್ ಕೀರ್ತಿಯುತ 4 ನೇ ವಾರ

.... ಸಹಸ್ರಾರು ಮಂದಿ ನೋಡಿ ಆನಂದಿಸುತ್ತಿರುವ ಚಿತ್ರರತ್ನ ....

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ:- ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಸ ನೃತ್ಯಗಳು ಗೇವಾಕಲರಿನಲ್ಲಿ

ಅಪೆರಾ— ಜಯಪ್ರದ 2 ನೇ ವಾರ

ಚಂಚಲಕ್ಕ

ಅಂಜಲಿದೇವಿ, ನಾಗೇಶ್ವರರಾವ್, ರಂಗರಾವ್, ಶಂಗವೇಲು ಇ ವಿ ಸರೋಜ

ಪಾಶ್ಚಾತ್ಯವಹಿಸಿರುವ ಚಿತ್ರಾಕರ್ಷಕ ತಮಿಳು ಚಿತ್ರ [ಪ್ರತಿದಿನ 3 ಆಟಗಳು

Sri 'SATYAVADI' Daily

Oldest Newspaper in the State ; Splendid

Advertisement Tariff

Casual	Rs 1
2 insertions and above	1
Contract above 100 inches	1-00
500	0-75

Column length 12½ inches; width 2 inches; 4 columns

The decision of the management is final in all

Manager "Satyavadi", Chamarajpuram, Mysore

Edited, Printed & Published by Dharma Prachara Nanda M. Krishna Rao, at the Satyavadi Press Chamarajpuram, Mysore